# ಆಹಾ ಸುದ್ದಿ!

★ ಸಸಿತೋಟ

ನ್ಯೂಯಾರ್ಕ್‌ನ ಮ್ಯಾಥ್ಯೂಗೆ ಪದೆ ಪದೆ ಜೈಲಿಗೆ ಹೋಗುವ ಅಭ್ಯಾಸ. ಅದಕ್ಕಾಗಿ ಆಗಾಗ ಸಣ್ಣಪುಟ್ಟ ಕಳವು ಮಾಡುತ್ತಿದ್ದವ, ಈ ಬಾರಿ ಭಾರಿ ದರೋಡೆಯನ್ನೇ ಮಾಡಿ 10 ವರ್ಷ ಶಿಕ್ಷೆ ಸಂಪಾದಿಸಿದ್ದಾನಂತೆ. ಜೈಲಿನ ಒಳಗಿರುವವರೆಲ್ಲಾ ಒಳ್ಳೆಯವರು, ತನಗೆ ಸಾಕಷ್ಟು ಗೌರವ ಕೊಡುತ್ತಾರೆ ಎಂಬುದು ಈ ತನ್ನ ಖಯಾಲಿಗೆ ಆತ ಕೊಟ್ಟ ಕಾರಣ. ಜೈಲಿಗೂ ಡಿಮಾಂಡ್ ಮಾಡುವ ಕಾಲ ಬಂತೇ!



ಬ್ಯಾಂಕಾಕ್ ಸಮೀಪ ವಾರ್ಷಿಕ ಮ್ಯಾಜಿಕ್ ಹಚ್ಚೆ ಹಬ್ಬ ಈಚೆಗೆ ನಡೆಯಿತು. ಹಚ್ಚೆ ಹಾಕಿಸಿಕೊಂಡರೆ ದುರದೃಷ್ಟವನ್ನು ದೂರ ಓಡಿಸಿ, ಅದೃಷ್ಟವನ್ನು ಬೆನ್ನ ಮೇಲೆ ಹೊತ್ತುಕೊಳ್ಳಬಹುದು ಎಂಬುದು ಅಲ್ಲಿಯವರ ನಂಬಿಕೆ. ಆದರೆ ಸ್ವಾರಸ್ಯ ಇದ್ದದ್ದು ಯಾರು ಯಾವ ಪ್ರಾಣಿಯ ಹಚ್ಚೆ ಹಾಕಿಸಿಕೊಂಡಿದ್ದರೋ ಅದೇ ರೀತಿ ವರ್ತಿಸಿದ್ದರಲ್ಲಿ. ಅರೆ ಪ್ರಜ್ಞಾವಸ್ಥೆಯಲ್ಲಿ ಹಾವು, ಚೇಳು, ಹುಲಿ, ಕರಡಿಯಂತೆ ಅವರನ್ನು ಕುಣಿಸಿದ್ದರಲ್ಲಿ ಬೆಂಗಳೂರು ಸಮೀಪದ ನಿತ್ಯ ಆನಂದವಾಗಿರುವ ಸ್ವಾಮಿಯೊಬ್ಬರ ಕೈವಾಡವೇನೂ ಇರಲಿಕ್ಕಿಲ್ಲ ಬಿಡಿ. ಮಾದಕದ್ರವ್ಯ ಮಿಕ್ಸ್ ಮಾಡಿದ ತೀರ್ಥ ಕುಡಿಸಲು ಬ್ಯಾಂಕಾಕ್ ಬೆಂಗಳೂರಿನಿಂದ ಬಲು ದೂರ.



ಈ 'ಪಿಗ್ಮಿ' ಮೇಕೆ ಶಿರ್ಲಿ ಕಳೆದ ವಾರ ಅಮೆರಿಕದ ಮಾಧ್ಯಮಗಳಲ್ಲಿ ಸುದ್ದಿ ಮಾಡುವುದರಲ್ಲಿ ರಾಜಕಾರಣಿಗಳಿಗೆ ಪೈಪೋಟಿ ನೀಡಿತ್ತು. ಅಲ್ಲಿಯ ಮೊಂಟಾನಾ ಕುಬ್ಜ ಪ್ರಾಣಿಗಳ ಮೃಗಾಲಯದಿಂದ ಕಾಣೆಯಾಗಿದ್ದು, ನಂತರ ಸಮೀಪದ ಬಾರ್ ಒಂದರಲ್ಲಿ ಸಿಕ್ಕಿತಂತೆ. ಮೃಗಾಲಯದೊಳಗೇ ಬಾರ್ ಆರಂಭಿಸಿದರೆ ಇದಕ್ಕೆ ಪರಿಹಾರ ಸಿಗಬಹುದೇನೋ. ಅದು ಬಿಟ್ಟು ಅಧಿಕಾರಿಗಳು ಬಾರ್ ಮಾಲೀಕನ ವಿಚಾರಣೆ ಆರಂಭಿಸಿದ್ದಾರಂತೆ!



ಚೀನಾದಲ್ಲಿ ಒಂದೇ ಮಗು ಪಾಲಿಸಿಯನ್ನು ಕಡ್ಡಾಯ ಮಾಡಿದರೂ, ಒಂದೇ ಸಾಕು ನಾಯಿ ಎಂದು ಸರ್ಕಾರ ಇನ್ನೂ ಕಡ್ಡಾಯಗೊಳಿಸಿಲ್ಲವಲ್ಲ. ಹೀಗಾಗಿ ಮುದ್ದಿನ ನಾಯಿಗಳಿಗೆ ಮನುಷ್ಯರ ಉಡುಪು ತೊಡಿಸಿ ಚೀನೀಯರು ಖುಷಿಪಡುತ್ತಿದ್ದಾರೆ. ಅಂತರ್‌ಜಾಲದಲ್ಲಿ ಈ 'ಪ್ಯಾಂಟಿಹೋಸ್' ತೊಟ್ಟ ಒಂದು ನಾಯಿಯ ಚಿತ್ರ ಪ್ರಕಟವಾಗಿದ್ದೇ ತಡ, ತಿದ್ದಿದ ನಾಯಿಚಿತ್ರಗಳು ಪ್ರಕಟವಾಗತೊಡಗಿದ್ದು, ಪ್ರಾಣಿದಯಾ ಸಂಘದವರ ಕಣ್ಣು ಬಿದ್ದಿದೆಯಂತೆ.

ಆರ್ಥಿಕ ಬಿಕ್ಕಟ್ಟಿನಿಂದ ಬ್ರಿಟನ್‌ಅನ್ನು ಮೇಲಕ್ಕೆತ್ತಲು ಕಷ್ಟಪಡುತ್ತಿರುವ ಪ್ರಧಾನಿ ಡೇವಿಡ್ ಕ್ಯಾಮೆರಾನ್, ಜೌಗಿನಲ್ಲಿ ಹೂತು ಹೋಗಿದ್ದ ಕುರಿಯನ್ನು ಮೇಲಕ್ಕೆತ್ತಿ ಸುದ್ದಿ ಮಾಡಿದ್ದಾರೆ. ವಾರದ ಕೊನೆಯ ರಜಾ ಕಳೆಯಲು ಆಕ್ಸ್‌ಫರ್ಡ್‌ಶೈರ್ ಕೌಂಟಿಯ ನಿವಾಸಕ್ಕೆ ತೆರಳಿದ್ದ ಕ್ಯಾಮೆರಾನ್‌ಗೆ ಜೌಗಿನಲ್ಲಿ ಕಷ್ಟಪಡುತ್ತಿದ್ದ ಕುರಿಯನ್ನು ಕಂಡು ಅಯ್ಯೋ ಪಾಪ ಎನಿಸಿತಂತೆ. ಕೆಸರಿನಲ್ಲಿ ಇಳಿದೇ ಬಿಟ್ಟರು. ಪ್ರಧಾನಿಯನ್ನು ಕಾಪಾಡಲು ಹಿಂದೆ ಇಬ್ಬರು ಪೊಲೀಸ್. ದೇಶದ ಹಣಕಾಸು ವಿಷಯದಲ್ಲಿ ಕಠಿಣರಾಗಿರುವ ಕ್ಯಾಮೆರಾನ್, ಕುರಿಯ ವಿಷಯದಲ್ಲಿ ಕರುಣಾಮಯಿಯಾಗಿದ್ದು ಬ್ರಿಟನ್ನಿನಲ್ಲಿ ಹೊಸ ಹೊಸ ಜೋಕ್‌ಗಳನ್ನು ಹುಟ್ಟು ಹಾಕುತ್ತಿದೆಯಂತೆ.



ನಡೆದಾಡುವ, ಹರಿದಾಡುವ ಪ್ರಾಣಿಗಳಿದ್ದರೆ ಸಾಕು, ರೇಸ್ ನಡೆಸಿ ರೊಕ್ಕ ಹೂಡುವುದು ಮನುಷ್ಯನಿಗೆ ಲಾಗಾಯ್ತಿನಿಂದ ಮೋಜು ನೀಡುವ ವಿಷಯ. ಟೊಬ್ಯಾಗೊ ದ್ವೀಪದಲ್ಲಿ ಏಡಿಗಳ ವಾರ್ಷಿಕ ರೇಸ್ ಇತ್ತೀಚೆಗೆ ನಡೆಯಿತು. ರೇಸ್‌ನಲ್ಲಿ ಗೆದ್ದು ಮಜಾ ಅನುಭವಿಸಲೂ ಅವುಗಳಿಗೆ ಪುರುಸೊತ್ತಿಲ್ಲ, ಕಾಯುತ್ತಿರುವ ಅರೆದ ಮಸಾಲೆ ಮೆತ್ತಿಸಿಕೊಂಡು ಬಿಸಿ ಎಣ್ಣೆಯಲ್ಲಿ ಈಜಾಡಬೇಕು ಪಾಪ, ಅದೂ ರೇಸ್‌ನಲ್ಲಿ ಸೋತ ಸಹ ಓಟಗಾರರ ಜೊತೆ.